## ಸಾಮಾನ್ಯ ಷರತ್ತುಗಳು

1. ಸರ್ಕಾರದ ಅಧಿಸೂಚನೆ ಸಂಖ್ಯೆ:ಡಿಪಿಎಆರ್ 06 ಪಿಎಲ್ಎಕ್ಸ್ 2012 ಬೆಂಗಳೂರು, ದಿನಾಂಕ 06.11.2013ರಲ್ಲಿ ನಿರ್ದಿಷ್ಟಪಡಿಸಿದಂತೆ, ಅಭ್ಯರ್ಥಿಗಳು ಹೈದ್ರಾಬಾದ್-ಕರ್ನಾಟಕ ಪ್ರದೇಶದ ಸ್ಥಳೀಯ ವ್ಯಕ್ತಿಯಾಗಿರಬೇಕು. ಕರ್ನಾಟಕ ಸರ್ಕಾರದಲ್ಲಿ ಪ್ರಚಲಿತದಲ್ಲಿರುವ ಹೈದ್ರಾಬಾದ್-ಕರ್ನಾಟಕ (ಕಲ್ಯಾಣ ಕರ್ನಾಟಕ) ಮೀಸಲಾತಿಯ ನಿಯಮಗಳನ್ನು ಈ ಹುದ್ದೆಯನ್ನು ಭರ್ತಿ ಮಾಡಿಕೊಳ್ಳಲು ಅನುಸರಿಸಲಾಗುವುದು.

2. ಅರ್ಜಿದಾರರ ವಯಸ್ಸನ್ನು **ದಿ:31.07.2020ಕ್ಕೆ** ಪರಿಗಣಿಸಲಾಗುವುದು.

3. ಕೇಂದ್ರ ಅಥವಾ ರಾಜ್ಯ ಸರ್ಕಾರ, ಸಾರ್ವಜನಿಕ ಉದ್ಯಮ, ಅರೆ ಸರ್ಕಾರಿ ಉದ್ಯಮಗಳಲ್ಲಿ ಕೆಲಸ ನಿರ್ವಹಿಸುತ್ತಿರುವವರು ತಮ್ಮ ಮೇಲಾಧಿಕಾರಿಗಳ / ಇಲಾಖಾ ಮುಖ್ಯಸ್ಥರ ಮೂಲಕ ಅರ್ಜಿಯನ್ನು ಸಲ್ಲಿಸಬೇಕು.

4. ಆಯ್ಕೆ ವಿಧಾನ: ವಿದ್ಯಾರ್ಹತೆ, ಅನುಭವ ಮತ್ತು ಸಂದರ್ಶನದ ಮೇರೆಗೆ ಇರುತ್ತದೆ. ಕನ್ನಡದಲ್ಲಿ ಓದಲು, ಬರೆಯಲು ಮತ್ತು ಸರಾಗವಾಗಿ ಮಾಡನಾಡಲು ಬರುವುದು ಅಗತ್ಯ.

5. ಮೂಲ ವೇತನದ ಜೊತೆಗೆ ನಿಗಮದ ನಿಬಂಧನೆಗಳ ಪ್ರಕಾರ ಹುದ್ದೆಗೆ ಅನ್ವಯಿಸುವ ಭತ್ಯೆಗಳಾದ ತುಟ್ಟಿ ಭತ್ಯೆ, ಮನೆ ಬಾಡಿಗೆ ಭತ್ಯೆ, ನಗರ ಪರಿಹಾರ ಭತ್ಯೆ, ಭವಿಷ್ಯ ನಿಧಿ ಕೊಡುಗೆ, ಗ್ರಾಚ್ಯೂಟಿ, ವೈದ್ಯಕೀಯ ಸೌಲಭ್ಯಗಳು, ಸಾಮೂಹಿಕ ವಿಮೆ, ಮನೆ/ವಾಹನ/ಕಂಪ್ಯೂಟರ್‌ಗಳಿಗೆ ಮುಂಗಡ ಹಣ ಮುಂತಾದವುಗಳನ್ನು ನಿಗಮದ ಸಂಬಂಧಪಟ್ಟ ನಿಯಮಾವಳಿಗನುಸಾರವಾಗಿ ನೀಡಲಾಗುವುದು.

6. ನಿಗದಿತ ಅರ್ಜಿ ನಮೂನೆಗಳನ್ನು ಪಡೆಯಲಿಚ್ಚಿಸುವವರು ನಿಗಮದ ವೆಬ್‌ಸೈಟ್- www.ksiidc.com ನಿಂದ ಡೌನ್‌ಲೋಡ್ ಮಾಡಿಕೊಂಡು ಪಡೆಯತಕ್ಕದ್ದು. ಅರ್ಜಿಯನ್ನು ನಿಗದಿತ ಅರ್ಜಿ ನಮೂನೆಯಲ್ಲಿ ಪೂರ್ಣ ವಿವರಗಳೊಂದಿಗೆ ಭರ್ತಿ ಮಾಡಿ ದೃಢೀಕರಿಸಿದ ಪ್ರಮಾಣ ಪತ್ರಗಳೊಂದಿಗೆ ಎಲ್ಲಾ ದಾಖಲೆ ಪತ್ರಗಳ ಪ್ರತಿಗಳು, ಇತ್ತೀಚೆಗೆ ತೆಗೆದ ಪಾಸ್‌ಪೋರ್ಟ್ ಅಳತೆಯ 2 ಭಾವಚಿತ್ರಗಳು, ಅನುಚ್ಛೇದ 371(ಜೆ) ಹೈದರಾಬಾದ್-ಕರ್ನಾಟಕ ಪ್ರಮಾಣ ಪತ್ರ, ಜಾತಿ/ವರ್ಗ ಪ್ರಮಾಣ ಪತ್ರಗಳ ಪ್ರತಿಗಳನ್ನು ಲಗತ್ತಿಸಿ, ವ್ಯವಸ್ಥಾಪಕ ನಿರ್ದೇಶಕರು, ಕೆಎಸ್ಐಐಡಿಸಿ, ಇವರಿಗೆ ಮೇಲ್ಕಂಡ ವಿಳಾಸಕ್ಕೆ **ದಿನಾಂಕ 31.07.2020ರೊಳಗೆ** ತಲುಪಿಸತಕ್ಕದ್ದು.

7. ನಿಗದಿತ ಅರ್ಜಿ ನಮೂನೆಯಲ್ಲಿ ಪೂರ್ಣ ವಿವರಗಳೊಂದಿಗೆ ಪಾಸ್‌ಪೋರ್ಟ್ ಅಳತೆಯ 2 ಭಾವಚಿತಗಳನ್ನು ಮತ್ತು ಸಂಬಂಧಪಟ್ಟ ದೃಢೀಕರಿಸಿದ ಪ್ರಮಾಣ ಪತ್ರಗಳೊಂದಿಗೆ ಎಲ್ಲಾ ದಾಖಲೆ ಪತ್ರಗಳನ್ನು ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಕೈಗಾರಿಕಾ ಮತ್ತು ಮೂಲಸೌಲಭ್ಯ ಅಭಿವೃದ್ಧಿ ನಿಗಮ ನಿಯಮಿತ (ಕೆಎಸ್ಐಐಡಿಸಿ), "ಖನಿಜ ಭವನ", 49, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು 560 001 ಇವರ ವಿಳಾಸಕ್ಕೆ **ದಿ: 31.07.2020ರೊಳಗೆ** ತಲುಪಿಸತಕ್ಕದ್ದು.

8. ಸಂದರ್ಶನದ ಸಮಯದಲ್ಲಿ ಹಾಜರುಪಡಿಸಬೇಕಾದ ಮೂಲ ದಾಖಲೆಗಳು:

   ಎ) ಶೈಕ್ಷಣಿಕ ಪ್ರಮಾಣ ಪತ್ರಗಳು
   ಬಿ) ಅನುಭವ ಪ್ರಮಾಣ ಪತ್ರಗಳು
   ಸಿ) ಪರಿಚ್ಛೇದ 371(ಜೆ) ಹೈದರಾಬಾದ್-ಕರ್ನಾಟಕ ಪ್ರಮಾಣ ಪತ್ರ
   ಡಿ) ಜಾತಿ ಪ್ರಮಾಣ ಪತ್ರ
   ಇ) ಗ್ರಾಮೀಣ ಅಭ್ಯರ್ಥಿ ಪ್ರಮಾಣ ಪತ್ರ
   ಎಫ್) ಕನ್ನಡ ಸಾಧಾರಣ ಪ್ರಮಾಣ ಪತ್ರ

9. ನಿಗದಿತ ನಮೂನೆಯಲ್ಲಿ ಇಲ್ಲದ, ಅಪೂರ್ಣವಾದ ಮತ್ತು ಅಗತ್ಯ ದಾಖಲೆಗಳಿಲ್ಲದೆ ಬರುವ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

10. ಮೇಲೆ ತಿಳಿಸಿರುವಂತೆ ವಿದ್ಯಾರ್ಹತೆ ಮತ್ತು ಅನುಭವ ಇರುವ ಅಭ್ಯರ್ಥಿಗಳು ಮಾತ್ರ ಅರ್ಜಿಗಳನ್ನು ಸಲ್ಲಿಸತಕ್ಕದ್ದು. ನಿಗದಿತ ವಿದ್ಯಾರ್ಹತೆ, ವಯೋಮಿತಿ ಮತ್ತು ಅನುಭವ ಇಲ್ಲದಿರುವ ಅಭ್ಯರ್ಥಿಗಳ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

11. ಎಲ್ಲಾ ವಿಷಯಗಳಲ್ಲೂ ನಿಗಮದ ತೀರ್ಮಾನವೇ ಅಂತಿಮವಾಗಿರುತ್ತದೆ.

ಸಹಿ/-
ವ್ಯವಸ್ಥಾಪಕ ನಿರ್ದೇಶಕರು